**1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು, ದ.ಕ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1100/2023**

**ಆರೋಪಿಯ ಹೆಸರು** : ಮಹಮ್ಮದ್ ಫಯಾಜ್
**ತಂದೆಯ ಹೆಸರು** : ಫಕ್ರುದ್ದೀನ್

**ವಯಸ್ಸು** : 40 ವರ್ಷ

**ಉದ್ಯೋಗ** : ಚಾಲಕ

**ವಾಸ್ತವ್ಯ** : #6-7/9 ಜೈನಾಬ್ ಮಂಜಿಲ್ ಹಳೆ ಗೇಟು ಮನೆ,
ಉಪ್ಪಿನಂಗಡಿ ಗ್ರಾಮ ಮತ್ತು ಅಂಚೆ,
ಪುತ್ತೂರು ತಾಲೂಕು.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆ</u>**

ಪ್ರಶ್ನೆ ನಂ.1 ನೀವು ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರ

ಪ್ರಶ್ನೆ ನಂ.2 ಫ್ರಾಸಾ-1(ಶ್ರೀ ಮಹಮ್ಮದ್ ಆಸೀಫ ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ.23.09.2023 ರಂದು ಮಾಡಾವು ಕಡೆಯಿಂದ ಕುಂಬ್ರ ಕಡೆಗೆ ಅಟೊನಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗಿದ್ದೇನು. ಹಿಂದಿರುಗಿ ಬರುವಾಗ ಕೆಯ್ಯೂರು ಗ್ರಾಮದ ಶಾಲೆಯ ಹತ್ತಿರ ಬೆಳ್ಳಾರೆ ಕಡೆಯಿಂದ ಕುಂಬ್ರ ಕಡೆಗೆ ಇಕೋ ಕಾರು ನಿರ್ಲಕ್ಷತನದಿಂದ ಎಡಬದಿಗೆ ಚಲಾಯಿಸಿಸಿಕೊಂಡು ಬಂದು ಮಣ್ಣು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಬಾಲಕನಿಗೆ ಡಿಕ್ಕಿಪಡಿಸಿದನು. ಆಗ ಸಮಯ ಸಂ.4.25 ಆಗಿತ್ತು. ಡಿಕ್ಕಿಪಡಿಸಿದ ಕಾರಣ ಬಾಲಕ ರಸ್ತೆಗೆ ಬಿದ್ದನು. ನಾನು ರಿಕ್ಷಾವನ್ನು ರಸ್ತೆ ಪಕ್ಕಕ್ಕೆ ಹಾಕಿ ಬಾಲಕ ಬಿದ್ದ ಜಾಗಕ್ಕೆ ಹೋದೆನು. ಅಲ್ಲಿ ಜನ ಸೇರಿದರು. ಬಾಲಕನಿಗೆ ತಲೆಗೆ ರಕ್ತಗಾಯವಾಗಿತ್ತು. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.3 ಫ್ರಾಸಾ-1 ರವರು ಮುಂದದುವರಿದು ನಂತರ ಅಲ್ಲಿ ಇದ್ದ ನಜೀಬ್ ಹಾಗೂ ಹ್ಯಾರೀಸ ಒಂದು ವಾಹನದಲ್ಲಿ ಪುತ್ತೂರು ಕಡೆಗ ಬಾಲಕನನ್ನು ಚಿಕಿತ್ಸೆ ಕೋಡಿಸುವ ಸಲುವಾಗಿ ಬಾಲಕನನ್ನು ಕರೆದುಕೊಂಡು ಹೋದರು. ಪುತ್ತೂರಿನ ಸಿಟಿ ಆಸ್ಪತ್ರೆಯಲ್ಲಿ ಕರೆದುಕೋಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಫಸ್ಟ ನೂರೊ ಆಸ್ಪತ್ರೆ ಕರೆದುಕೋಂಡು ಹೋಗಿದ್ದಾರೆ ಎಂದು ಗೊತ್ತಾಯಿತು. ಅದೇ ದಿನ ಸಂ.**7.25** ರ ಸಮಯ ಬಾಲಕ ಮೃತಪಟ್ಟ ವಿಚಾರ ಗೊತ್ತಾಯಿತು. ಮೃತಪಟ್ಟ ಬಾಲಕನ ಹೆಸರು ಆದಿಲ್. ಕಾರನ್ನು ಓಡಿಸಿಕೊಂಡು ಹೋಗಿ ಡಿಕ್ಕಿಪಡಿಸಿದ ವ್ಯಕ್ತಿಯ ಹೆಸರು ಫಯಾಜ. ಕಾರಿನ ಚಾಲಕನ ತಪ್ಪಿನಿಂದ ಮೆಹಮ್ಮದ ಆದಿಲ್‌ಗೆ ಅಪಘಾತವಾಗಿ ಆತ ಮೃತಪಟ್ಟಿದ್ದಾನೆ. ಪೊಲಿಸರು ಘಟನೆ ಸಂಬಂಧ ನನ್ನನು ವಿಚಾರಣೆ ಮಾಡಿದರು. ಕಾರಿನ ಚಾಲಕನನ್ನು ನೋಡಿದರೆ ಗುರುತಿಸಬಲ್ಲೇ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.4 ಫ್ರಾಸಾ-2(ಶ್ರೀ ಹ್ಯಾರೀಸ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮೃತ ಮೊಹಮ್ಮದ ಆದಿಲ್ ನನ್ನ ಅಕ್ಕನ ಮಗ. ಚಾಸಾ1 ನನ್ನ ತಮ್ಮ. ದಿ.23.09.2023 ರಂದು ಪುತ್ತೂರು ತಾಲೂಕು ಕೆಯ್ಯೂರ ಗ್ರಾಮದ ಶಾಲೆಯ ಹತ್ತಿರ ಭರತ ಎನ್ನುವವರ ಅಂಗಡಿಯ ಮುಂದೆ ನಾನು ಮತ್ತು ನನ್ನ ತಮ್ಮ ಚಾಸಾ1 ನಿಂತುಕೊಂಡಿದ್ದಾಗ ಬೆಳ್ಳಾರೆ ಕಡೆಯಿಂದ ಕುಂಬ್ರ ಕಡೆಗೆ ಇಕೋ ಕಾರು ನಿರ್ಲಕ್ಷತನದಿಂದ ಎಡಬದಿಗೆ ಚಲಾಯಿಸಿಕೊಂಡು ಬಂದು ಮಣ್ಣು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೊಹಮ್ಮದ ಆದಿಲ್‌ನಿಗೆ ಡಿಕ್ಕಿಪಡಿಸಿದನು. ಆಗ ಸಮಯ ಸಂ.4.25 ಆಗಿತ್ತು. ಡಿಕ್ಕಿಪಡಿಸಿದ ಕಾರಣ ಮೊಹಮ್ಮದ ಆದಿಲ್ ರಸ್ತೆಗೆ ಬಿದ್ದನು. ನಾನು ಮತ್ತು ನನ್ನ ತಮ್ಮ ಹಾಗೂ ಸಾರ್ವಜನಿಕರು ಪೆಟ್ಟಾಗಿದ್ದ ಮೊಹಮ್ಮದ ಆದಿಲ್ ನನ್ನು ಎತ್ತಿ ನೋಡಿದಾಗ ಆತನ ತಲೆಗೆ ತೀವ್ರ ರಕ್ತಗಾಯವಾಗಿದ್ದು ಕಂಡು ಬಂದಿತ್ತು. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ನಂತರ ನಾನು ಮತ್ತು ನಜೀಬ್ ಒಂದು ವಾಹನದಲ್ಲಿ ಪುತ್ತೂರು ಸಿಟಿ ಆಸ್ಪತ್ರೆಗೆ ಕರೆದುಕೋಂಡು ಹೋಗಿ ಪ್ರಥಮ ಚಿಕಿತ್ಸೆ ಪಡಿಸಿ ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಫಸ್ಟ ನೂರೊ ಆಸ್ಪತ್ರೆ ಕರೆದುಕೋಂಡು ಹೋದೇವು. ಅದೇ ದಿನ ಸಂ.7.25 ರ ಸಮಯ ಮೊಹಮ್ಮದ ಆದಿಲ್ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟನು . ಕಾರನ್ನು ಓಡಿಸಿಕೊಂಡು ಹೋಗಿ ಡಿಕ್ಕಿಪಡಿಸಿದ ವ್ಯಕ್ತಿಯ ಹೆಸರು ಮಹಮ್ಮದ ಫಯಾಜ. ಕಾರಿನ ಚಾಲಕನ ತಪ್ಪಿನಿಂದ ಮೊಹಮ್ಮದ ಆದಿಲ್ ಅಪಘಾತವಾಗಿ ಆತ ಮೃತಪಟ್ಟಿದ್ದಾನೆ. ಪೋಲಿಸರು ಘಟನೆ ಸಂಬಂಧ ನನ್ನನು ವಿಚಾರಣೆ ಮಾಡಿದರು. ಕಾರಿನ ಚಾಲಕನನ್ನು ನೋಡಿದರೆ ಗುರುತಿಸಬಲ್ಲೇ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.5 ಫ್ರಾಸಾ-3(ಶ್ರೀ ಮಹಮದ್ ನಜೀಬ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮೃತ ಮುಹಮದ್ ಆದಿಲ್ ನನ್ನ ಅಕ್ಕನ ಮಗ. ದಿ.23.09.2023 ರಂದು ನಾನು ಕೆಯ್ಯೂರು ಗ್ರಾಮದಲ್ಲಿನ ಕೆಯ್ಯೂರು ಪಬ್ಲಿಕ್ ಶಾಲೆಯ ಪಕ್ಕದಲ್ಲಿರುವ ಭರತ್ ಎನ್ನುವವರ ಅಂಗಡಿಯಲ್ಲಿ ಸಂಜೆ 4.25 ರ ಸಮಯದಲ್ಲಿ ಇದ್ದೆನು. ಆಗ ಶಾಲೆ ಬಿಟ್ಟಿದ್ದು ನನ್ನ ಅಕ್ಕನ ಮಗ ಶಾಲೆಯಿಂದ ಮನೆಗೆ ಕುಂಬ್ರ ಕಡೆಯಿಂದ ಬೆಳ್ಳಾರೆ ಕಡೆಗೆ ಹೋಗುವ ಬಲಬದಿಯ ಮಣ್ಣುರಸ್ತೆಯಲ್ಲಿ ನಡೆದು ಹೋಗುತ್ತಿದ್ದನು. ಆ ಸಮಯ ಬೆಳ್ಳಾರೆ ಕಡೆಯಿಂದ ಬಂದ ಒಂದುಮಾರುತಿ ಇಕೋ ಕಾರನ್ನು ಅದರ ಚಾಲಕ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನನಿಂದ ಚಲಾಯಿಸಿಕೊಂಡು ಬಂದು ಎಡಬದಿಯಿಂದ ಬಂದು ನನ್ನ ಅಕ್ಕನ ಮಗನಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿದನು. ಆತ ಡಿಕ್ಕಿಪಡಿಸಿದ ಕಾರಣ ನನ್ನ ಅಕ್ಕನ ಮಗ ಡಾಂಬರು ರಸ್ತೆಯ ಮೇಲೆ ಬಿದ್ದು ಆತನ ತಲೆಗೆ ತೀವ ಸ್ವರೂಪದ ಗಾಯವಾಗಿ ಆತ ಮಾತನಾಡುತ್ತಿರಲಿಲ್ಲ. ನಂತರ ನಾನು ಮತ್ತು ನನ್ನ ಅಣ್ಣ ಹ್ಯಾರಿಸ್ ಪೆಟ್ಟಾಗಿದ್ದ ನನ್ನ ಅಕ್ಕನ ಮಗನನುನ ಪುತ್ತೂರು ಸಿ ಟಿ ಆಸ್ಪತ್ರೆಗೆ ಕಾರಿನಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿ ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಪಡೀಲಿನಲ್ಲಿರುವ ಫಸ್ಟ್ ನ್ಯೂರೋ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡ ಹೋದೆವು ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.6 ಫ್ರಾಸಾ-3 ರವರು ಮುಂದುವರಿದು ಆದೇ ದಿನ ಚಿಕಿತ್ಸೆ ಫಲಕಾರಿಯಾಗದೇ ನನ್ನ ಅಕ್ಕನ ಮಗ ಸಂಜೆ **7.25** ಕ್ಕೆ ಮೃತಪಟ್ಟ ಬಗ್ಗೆ ವೈದ್ಯರು ತಿಳಿಸಿದರು. ನನ್ನ ಅಕ್ಕನ ಮಗ ಮೃತಪಡಲು ಕಾರುಚಾಲಕ ಫಯೂಜ್ನ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನ ಕಾರಣವಾಗಿರತ್ತದೆ. ನಂತರ ನಾನು ಸಂಪ್ಯ ಪೋ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇನೆ. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ದಿ.**24-9-2023** ರಂದು ಪೊಲೀಸರು ಸ್ಥಳ ಮಹಜರು ಮಾಡುವ ಸಲುವಾಗಿ ಅಪಘಾತ ಆದ ಸ್ಥಳಕ್ಕೆ ಬಂದಿದ್ದರು. ನಾನು ಅಪಘಾತ ಆದ ಸ್ಥಳವನ್ನು ಅವರಿಗೆ ತೋರಿಸಿದ್ದೆನು. ಸ್ಥಳದಲ್ಲಿ ಇದ್ದ ಕಾರನ್ನು ಪೊಲೀಸರು ವಶ ಪಡೆದರು. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ **?**

ಉತ್ತರ

ಪ್ರಶ್ನೆ ನಂ.7 ಫ್ರಾಸಾ-4(ಶ್ರೀ ಮೊಹಮದ್ ಇರ್ಫಾನ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ.3 ಮತ್ತು 4 ಕ್ಕೆ ನಾನು ದಿ.24.09.2023 ರಂದು ಕೆಯ್ಯೂರು ಗ್ರಾಮದ ಶಾಲೆಯ ಬಳಿ ಬೆಳ್ಳಾರಿ-ಪುತ್ತೂರು ರಸ್ತೆಯ ದಕ್ಷಿಣ ಭಾಗದಲ್ಲಿ ಸಹಿ ಮಾಡಿದ್ದೇನೆ. ಅಲ್ಲಿಗೆ ಪೊಲೀಸರು ಕಾರ್ಯಾಚರಣೆ ಮಾಡಲು ಬಂದಿದ್ದರು. ಚಾಸಾ-1 ರವರು ಸ್ಥಳ ಮತ್ತು ಸಿಲ್ವರ್ ಬಣ್ಣದ

ಇಕೋ ಕಾರನ್ನು ತೋರಿಸಿದ್ದು ಸದರಿ ವಾಹನವನ್ನು ಪೊಲೀಸರು ತಮ್ಮ ವಶ ಪಡೆದರು ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.8 ಪ್ರಾಸಾ-5(ಶ್ರೀ ಅಹಮದ್ ಅವೀಜ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯ ಇದೆ. ನನ್ನ ಮಾಲೀಕತ್ವದ ಇಕೋ ಕಾರು ಇದೆ. ಅದರ ನೊಂದಣಿ ಸಂ. ಸರಿಯಾಗಿ ಗೊತ್ತಿಲ್ಲ. ದಿ. 23-9-23 ರಂದು ನನಗೆ ಸೇರಿದ ವಾಹನ ಯಾರ ಸ್ವಾಧೀನದಲ್ಲಿ ಇತ್ತು ಎಂದು ಗೊತ್ತಿಲ್ಲ. ಸುಮಾರು 1 ವರೆ ವರ್ಷಗಳ ಹಿಂದೆ ಪೋ ಠಾಣೆಯಿಂದ ನನಗೆ ಕರೆ ಬಂದಿತ್ತು ಸದರಿ ಕರೆಯಲ್ಲಿ ನಿಮಗೆ ಸೇರಿದ ಕಾರು ಅಪಘಾತವಾಗಿ ನಮ್ಮ ವಶದಲ್ಲಿದೆ ಅದನ್ನು ಬಿಡಿಸಿಕೊಳ್ಳಿ ಎಂದು ಪೊಲೀಸರು ತಿಳಿಸಿದರು. ನಾನು ಪೋ ಠಾಣೆಗೆ ಹೋಗಿ ಸಹಿ ಮಾಡಿ ಕಾರನ್ನು ನನ್ನ ವಶ ಪಡೆದಿದ್ದೇನೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.9 ಪ್ರಾಸಾ-6(ಶ್ರೀ ಅಬ್ದುಲ ಜಲೀಲ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸ್ಥಳಕ್ಕೆ ಪೊ. ಇನ್ಸಪೆಕ್ಟರ ಮಹಜರ ಮಾಡಲು ಬಂದಿದ್ದರು. ಮಹಜರ ಮಾಡುವ ಕಾಲದಲ್ಲಿ ಪೊಲೀಸರನ್ನು ಹೊರತುಪಡಿಸಿ ಬೇರೆ ವ್ಯಕ್ತಿ ಇದ್ದರು. ಸ್ಥಳದಲ್ಲಿ ಕೆಎ 19 ಎಂಜಿ ನೊಂದಣಿ ಸಂಖ್ಯೆಯ ಸಿಲ್ವರ ಬಣ್ಣದ ಇಕೋ ಕಾರು ಇತ್ತು ಅದನ್ನು ಪೊಲೀಸರು ತಮ್ಮ ವಶ ಪಡೆದರು ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.10 ಪ್ರಾಸಾ-7(ಶ್ರೀ ಪ್ರಶಾಂತ ಪಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಮಾರ್ಚ್ 2020 ರಿಂದ ಮಾರ್ಚ 2025 ರವರೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೊ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿ.23-09-2023 ರಂದು ಪುತ್ತೂರು ಗ್ರಾಮಾಂತರ ಪೋ.ಠಾಣೆಯ ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 9 ರ ಸಮಯದಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಸಂ.9/2023 ರಂತೆ ನೊಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಅದನ್ನು ಮಾನ್ಯ ನ್ಯಾ ಯಾಲಯಕ್ಕೆ ಚಾಸಾ15 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.11 ಪ್ರಾಸಾ-8(ಶ್ರೀ ಅಸ್ವಾನ ಬಿ ಎಸ್ ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಜುಲೈ 2023 ರಿಂದ ಪ್ರಸ್ತುತವು ಸಹ ಪುತ್ತೂರು

ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಹಿರಿಯ ಮೊ. ವಾಹನ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.26-09-2023 ರಂದು ಪುತ್ತೂರು ಗ್ರ್ರಾಮಾಂತರ ಪೋ ಠಾಣೆಯ ಉಪ ನಿರೀಕ್ಷಕರ ಮನವಿಯ ಮೇರೆಗೆ ಅದೇ ದಿನ ಮ.2 ಗಂಟೆಗೆ ಪುತ್ತೂರು ಗ್ರಾಮಾತಂರ ಠಾಣಾ ಆವರಣದಲ್ಲಿ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಲ್ಲಿಸಲಾದ ವಾಹನ ಸಂ.ಕೆಎ-19-ಎಂಜಿ-5294 ನೊಂದಣಿ ಸಂಖ್ಯೆಯ ಮಾರುತಿ ಇಕೋ ಕಾರನ್ನು ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ. ನಾನು ವಾಹನವನ್ನು ಪರೀಕ್ಷಿಸಿದಾಗ ವಾಹನಕ್ಕೆ ಮುಂದಿನ ಎಡಬದಿಯ ಹೆಡ್ ಲೈಟ್ ಹಾಗೂ ಇಂಡಿಕೆಟರ್ ಗ್ಲಾಸ್ ಒಡೆದಿತ್ತು ಎಡಬದಿಯ ಹೆಡ್ ಲೈಟ್ ಮೇಲಿನ ಬೋನೆಟ್ ಹಾಗೂ ಮುಂದಿನ ಬಂಪರ್ ನ ಎಡಬದಿಯಲ್ಲಿ ಜಖಂ ಆಗಿತ್ತು. ನಾನು ವಾಹನವನ್ನು ಚಲಾಯಿಸಿ ನೋಡಿದಾಗ ಅದರ ಅಡೆತಡೆಗಳು ಸುಸ್ಥಿತಿಯಲ್ಲಿದ್ದವು. ನನ್ನ ಅಭಿಪ್ರಾಯದಂತೆ ಅಪಘಾತವು ನಾನು ಪರೀಕ್ಷಿಸಿದ ವಾಹನದ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.12 ಫ್ರಾಸಾ-9(ಶ್ರೀ ರವಿ ಬಿ ಎಸ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಜೂನ್ 2023 ರಿಂದ ಮಾರ್ಚ್ 2024 ರವರೆಗೆ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪ್ರಭಾರಿ ಪೊ. ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿ.1-10-2023 ರಂದು ಈ ಪ್ರಕರಣದ ಕಡತವನ್ನು ಚಾಸಾ18 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ11 ರವರಿಗೆ ಕಲಂ 133 ಐಎಂವಿ ಕಾಯ್ದೆ ಅಡಿ ನೋಟಿಸ್ ಜಾರಿಗೊಳಿಸಿದ್ದೇನೆ. ಅದೇ ದಿನ ಅವರಿಂದ ಉತ್ತರವನ್ನು ಪಡೆದಿರುತ್ತೇನೆ. ನಂತರ ಚಾಸಾ11 ರವರಿಂದ ನಷ್ಟ ಭರ್ತಿ ಬಾಂಡ್ ಪಡೆದು ಅಪಘಾತಕ್ಕೀಡಾದ ವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ. ಅದೇ ದಿನ ಆರೋಪಿತನಿಗೆ ಕಲಂ 41 ಎ ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸ್ ಜಾರಿಗೊಳಿಸಿರುತ್ತೇನೆ. ಅದೇ ದಿನ ಚಾಸಾ17 ರವರಿಂದ ವಾಹನದ ಪೋಟೊ ಹಾಗೂ ಫೋಟೊ ತೆಗೆದ ಬಗ್ಗೆ ಕಲಂ 65 ಬಿ ದೃಡಪತ್ರವನ್ನು ಪಡೆದಿರುತ್ತೇನೆ. ದಿ.18.10.2023 ರಂದು ಚಾಸಾ12 ರವರಿಂದ ಐಎಂವಿ ವರದಿಯನ್ನು ಪಡೆದಿರುತ್ತೇನೆ. ಚಾಸಾ13 ರವರಿಂದ ಪಿಎಂ ವರದಿಯನ್ನು ಪಡೆದಿರುತ್ತೇನೆ. ದಿ. 19.10.2023 ರಂದು ಪ್ರಕರಣದ ತನಿಖೆ ಪೂರೈಸಿದ ಕಾರಣ ಆರೋಪಿ ವಿರುದ್ಧ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.13 ಫ್ರಾಸಾ-10(ಶ್ರೀ ಧನಂಜಯ ಬಿ ಸಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಜೂನ್ 2023 ರಿಂದ ಅಕ್ಟೋಬರ್ 2023 ರ ವರೆಗೆ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿ ಎಸ್ ಐ ಆಗಿ

ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 24-09-2023 ರಂದು ಚಾ.ಸಾ.16 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾ.ಸಾ.9 ಮತ್ತು 10 ರವರ ಸಮಕ್ಷಮ ಸ್ಥಳ ಮಹಜರನ್ನು ನಡೆಸಿರುತ್ತೇನೆ ಹಾಗೂ ಸ್ಥಳದಲ್ಲಿ ನಕ್ಷೆಯನ್ನು ಕೂಡಾ ತಯಾರಿಸಿರುತ್ತೇನೆ. ಸ್ಥಳ ಮಹಜರನ್ನು ಬೆ.10.00 ರಿಂದ 11.00 ಗಂಟೆಯವರೆಗೆ ಜರುಗಿಸಲಾಗಿದೆ. ಮಹಜರು ಕಾಲದಲ್ಲಿ ಪಂಚರ ಸಮಕ್ಷಮ ಕೆಎ-19 ಎಮ್ಜ್-5294 ನೊಂದಣಿ ಸಂ. ಇಕೋ ಕಾರನ್ನು ನನ್ನ ವಶಕ್ಕೆ ಪಡೆದಿದ್ದೇನೆ. ಸ್ವಾಧೀನಪಡಿಸಿಕೊಂಡ ವಾಹನವನ್ನು ಪಿ.ಎಫ್‌ಗೆ ಲಗತ್ತಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿ.24-09-23 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-7 ಮತ್ತು 8 ರವರ ಹೇಳಿಕೆಗಳನ್ನೂ ಕೂಡಾ ಪಡೆದಿದ್ದೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ19 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.14 : ಆರೋಪಿಯಾದ ನೀನು ಈ ಪ್ರಕರಣದ ಬಗ್ಗೆ ಏನಾದರೂ ಹೇಳುವುದಿದೆಯಾ?

ಉತ್ತರ :

ಪ್ರಶ್ನೆ ನಂ.15 : ನಿನ್ನ ಪರ ಸಾಕ್ಷಿ ವಿಚಾರಣೆ ಮಾಡುವಿಯಾ?

ಉತ್ತರ :

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಹೇಳಿಕೆಯ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

ದಿನಾಂಕ:18/06/2026

ಸ್ಥಳ: ಪುತ್ತೂರು.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು